ಶ್ರೀ ಬೇಗಾನೆ ರಾಮಯ್ಯ.—ಪರಿಸ್ಥಿತಿಯನ್ನು ನೋಡಿ ಇದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.-ರೈತರಿಗೆ ಅನುಕೂಲವಾಗತಕ್ಕ ಅನೇಕ ಯೋಜನೆಗಳನ್ನು ಸರ್ಕಾರ ದವರು ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಸಬ್ಸಿಡಿ ಹಣ ಇದಕ್ಕಾಗಿ ಖರ್ಚಾಗುತ್ತಿದೆ. ರೈತರಿಗೆ ಸಣ್ಣ ಹಿಡುವಳಿದಾರರಿಗೆ, ಕುಶಲಕರ್ಮಿಗಳಿಗೆ ಸರಿಯಾದ ವೇಳೆಯಲ್ಲಿ ಸಾಲ ಸಿಗುವುದಿಲ್ಲ. ನಿಮ್ಮ ಯೋಜನೆಗೆ ಅನುಗುಣವಾಗಿ ಸಹಕಾರ ಕೊಡುವಂತೆ ಬ್ಯಾಂಕುಗಳ ಮೇಲೆ ಹತೋಟಿ ಇಟ್ಟುಕೊಳ್ಳುವು ದಕ್ಕಾಗುವುದಿಲ್ಲವೇ ?

ಶ್ರೀ ಬೇಗಾನೆ ರಾಮಯ್ಯ.—ಬ್ಯಾಂಕುಗಳವರ ಸಹಕಾರವನ್ನು ನಾವು ಸದಾ ಯಾಚನೆ ಮಾಡುತ್ತಿದ್ದೇವೆ. ನಾವು ಅವರ ಸಹಕಾರವನ್ನು ಕೇಳಿದ್ದೇವೆ. ಬಹುಶಃ ಅವರು ನಮಗೆ ಸಹಕಾರ ಕೊಡಬಹುದು. ಅವರೂ ಮುಂದೆ ಬರುತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇ ಗೌಡ.—ಯಾರು ಯಾರು ಅಲ್ಪಾವಧಿ ಸಾಲ ತೆಗೆದುಕೊಂಡಿದ್ದಾರೋ ಅದಕ್ಕೆ ಈ ಸಬ್ಸಿಡಿ ಹಣ ಅಡ್ಜಸ್ಟ್ ಮಾಡಿದ್ದಾರೆ ಅದಕ್ಕೆ ಖರ್ಚಾಗಿದೆ ಈ ಯೋಜನೆ ಪ್ರಕಾರ ಕುರಿ ಕೊಳ್ಳುವುದಕ್ಕೆ ಡೈರಿ ಫಾರಂ ಮಾಡುವುದಕ್ಕೆ ಮತ್ತು ಸಾಮೂಹಿಕ ನೀರಾವರಿ ಭಾವಿಗಳನ್ನು ಮಾಡುವು ದಕ್ಕೆ ಮುಂತಾದ ಉಪಯುಕ್ತವಾದ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣ ಖರ್ಚಾಗಿಲ್ಲ. ಯಾರು ಯಾರು ಎಲ್ಲೆಲ್ಲಿ ಅಲ್ಪಾವಧಿ ಸಾಲ ತೆಗೆದುಕೊಂಡಿದ್ದಾರೋ ಅದಕ್ಕೆ ಸಬ್ಸಿಡಿ ಕೊಟ್ಟು ಕೈ ಮುಗಿದಿದ್ದಾರೆ. ರೈತರಿಗೆ ಸಿಗಬೇಕಾದ ಪ್ರಯೋಜನ ಸರಿಯಾಗಿ ಸಿಕ್ಕಿಲ್ಲ. ಸಾಮೂಹಿಕ ನೀರಾವರಿ ಯೋಜನೆ ಬಹಳ ಉಪಯುಕ್ತ ವಾದ ಯೋಜನೆ. ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಹಾಸನ ತಾಲ್ಲೂಕಿನಲ್ಲಿ ಎಷ್ಟು ಸಾಮೂಹಿಕ ನೀರಾವರಿ ಭಾವಿಗಳನ್ನು ತೋಡುವ ಪ್ರಪೋಸಲ್ ಬಂದಿವೆ ? ಪ್ರಪೋಸಲ್ ಯಾವಾಗ ಬಂದಿದೆ, ಎಷ್ಟು ಮಾಡಿದ್ದೀರಿ, ಯಾವ ಯಾವ ಹಂತದಲ್ಲಿ ಅವು ಇವೆ ಎಂಬುದನ್ನು ದಯಮಾಡಿ ತಿಳಿಸಿ ?

ಶ್ರೀ ಬೇಗಾನೆ ರಾಮಯ್ಯ.—ವಿವರಗಳನ್ನು ನಾನು ಒದಗಿಸಿದ್ದೇನೆ. ಸಾಮೂಹಿಕ ನೀರಾವರಿ ಭಾವಿಗಳಿಗೆ ೫೦ ಪರ್ಸೆಂಟ್ ಸಬ್ಸಿಡಿ ಕೊಟ್ಟಿದೆ. ಹಾಸನದ ಬಗ್ಗೆ ಪೂರ್ತಿ ವಿವರ ನನ್ನ ಬಳಿ ಈಗ ಇದೆ. ಬೇಕಾದರೆ ನಾನು ಒದಗಿಸುತ್ತೇನೆ.

ಅಧ್ಯಕ್ಷರು.—ಈಗ ವಿವರ ಬೇಡ. ಬೇಕಾದರೆ ಮಾನ್ಯ ಸದಸ್ಯರು ಬಂದು ನೋಡಿಕೊಳ್ಳಲಿ.

ಶ್ರೀ ಕೆ. ಹೆಚ್. ಹನುಮೇ ಗೌಡ.—ಈ ಯೋಜನೆಗಳಿಗೆ ಕೊಟ್ಟಿದ್ದ ಸಬ್ಸಿಡಿ ಹಣವನ್ನು ಖರ್ಚು ಮಾಡಿಲ್ಲ. ರೈತರಿಗೆ ಅಲ್ಪಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲಗಳಿಗೆ ಇದನ್ನು ಅಡ್ಜಸ್ಟ್ ಮಾಡಿ ಬಿಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೂಲಂಕುಶವಾದ ವರದಿ ತರಿಸಿಕೊಂಡು ಯಾರು ಹೊಣೆಗಾರ ರಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಿ ಮತ್ತು ಇನ್ನು ಮುಂದೆ ಇಂಥ ಉಪಯುಕ್ತ ಯೋಜನೆಯಿಂದ ಕುರಿ ಕೋಳಿ ಸಾಕಾಣಿಕೆ ಮತ್ತು ಸಾಮೂಹಿಕ ಭಾವಿ ಮುಂತಾದ ಕಾರ್ಯಗಳಿಗೆ ಮಾತ್ರ ಖರ್ಚು ಮಾಡುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬೇಗಾನೆ ರಾಮಯ್ಯ.—ಇದು ಉತ್ತಮ ಸಲಹೆ. ನಿಜವಾಗಿ ಪರಿಶೀಲನೆ ಮಾಡುತ್ತೇನೆ.

Sanction of Family Benifit Fund Scheme to State Khadi and Village Industries employees.

296. SRI G. K. TAKKED (Parasgad).—Will the Minister for Labour, Small Scale Industries and Wakf be pleased to state.—

whether it is a fact that the proposal sent by the State Khadi and Village Industries Board for sanction of Family Benefit Fund Scheme 1975, has been turned down by the Government ? If so, the reason therefor although the Scheme is intended to provide social security to the employees ?

SRI C. M. IBRAHIM (Minister for Labour, Small Scale Industries and Wakf).—

The proposal to extend the Family Benefit fund scheme to the employees of the State Khadi and Village Industries Board is under consideration of Government.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಸಚಿವರು ಕೇವಲ ಹಾರಿಕೆ ಉತ್ತರ ಕೊಟ್ಟಿದ್ದಾರೆ. ಕುಟುಂಬ ಸೌಲಭ್ಯ ನಿಧಿ ಯೋಜನೆಯನ್ನು ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಕೆಲಸ ಮಾಡುವವರಿಗೂ ಅನ್ವಯಿಸ ಲಾಗಿದೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಇದನ್ನು ಅನ್ವಯಿಸಲಾಗಿದೆ. ಆದರೆ, ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ನೌಕರರಿಗೆ ಮಾತ್ರ ಕುಟುಂಬ ಸೌಲಭ್ಯ ನಿಧಿ ಯೋಜನೆಯನ್ನು ಏತಕ್ಕೆ ಮಂಜೂರು ಮಾಡಿಲ್ಲ ? ಈ ನೌಕರರು ಅತ್ಯಂತ ಕಷ್ಟದಲ್ಲಿದ್ದಾರೆ. ಆದುದರಿಂದ, ಸರ್ಕಾರ ದವರು ಇದನ್ನು ದಯವಿಟ್ಟು ಪರಿಶೀಲಿಸಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ನೀಡಿರುವ ಉತ್ತರವನ್ನು ಹಾರಿಕೆ ಉತ್ತರವೆಂದು ಹೇಳುವುದು ಸರಿಯಲ್ಲ. ಈ ಯೋಜನೆಯನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ದಿನಾಂಕ ೨೧-೧-೧೯೭೯ರಲ್ಲಿ ಸರ್ಕಾರಕ್ಕೆ ಕಳುಹಿಸಿದೆ. ಹಣಕಾಸು ಇಲಾಖೆಯವರು ಈ ಯೋಜನೆಯನ್ನು ಖಾದಿ ಹಾಗೂ ಗ್ರಾಮೋದ್ಯೋಗ ಮಂಡಲಿ ನೌಕರರಿಗೆ ಅನ್ವಯವಾಗುವುದಿಲ್ಲವೆಂದು ಹೇಳಿದ ಮೇಲೂ ಕೂಡ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಬೇಕೆಂದು ದಿನಾಂಕ ೫-೩-೧೯೮೦ರಲ್ಲಿ ಕೈಗಾರಿಕಾ ಕಮೀಷನರ್ ಅವರ ಚೇಂಬರ್‌ನಲ್ಲಿ ಕಾರ್ಮಿಕ ಪ್ರತಿನಿಧಿಗಳೊಡನೆ ಚರ್ಚಿಸಲಾಗಿದೆ. ಇದನ್ನು ಸರ್ಕಾರ ಸಹಾನುಭೂತಿ ಯಿಂದ ಪರಿಶೀಲನೆ ಮಾಡುತ್ತದೆ. ಹಿಂದೆ ಈ ಕುರಿತು ಬಂದಿದ್ದ ಗಮನ ಸೆಳೆಯುವ ಸೂಚನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಈ ಮಂಡಲಿಯಲ್ಲಿ ನೇಮಕಾತಿ ನಿಯಮಗಳು ಇನ್ನೂ ರಚಿತವಾಗಿಲ್ಲ. ಹುದ್ದೆಗಳು ಸೃಷ್ಟಿಯಾಗದೆ ಇರುವಾಗ ಹದಿನೈದು ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದೆನ್ನೆಲ್ಲ ಇನ್ನು ಆರು ತಿಂಗಳೊಳಗೆ ಸರಿಪಡಿಸಿ, ಪೂರ್ಣ ತಹಬಂದಿಗೆ ತರುವ ಪ್ರಯತ್ನವನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಮಟ್ಟಿಗೆ ಸರ್ಕಾರ ಮಾಡುತ್ತದೆಂದು ನಾನು ಆಶ್ವಾಸನೆ ಕೊಡಬಯಸುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಖಾದಿ ಮಂಡಲಿಯಲ್ಲಿ ಸೇವೆ ಸಲ್ಲಿಸದವರಲ್ಲಿ ಈಗಾಗಲೇ ಕೆಲವು ಮಂದಿ ನಿಧನ ಹೊಂದಿದ್ದಾರೆ. ಅಂತಹವರ ಸಂಸಾರಗಳು ಇಂದು ಬಹಳ ಕಷ್ಟದಲ್ಲಿವೆ. ಅಂತಹ ಸಂಸಾರಗಳಿಗೆ ಸಹಾಯ ಮಾಡಲು ತಾವು ದಯವಿಟ್ಟು ಮುಂದೆ ಬರುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಈಗಾಗಲೇಹೇಳಿದ್ದೇನೆ. ಖಾದಿ ಮಂಡಲಿಯಲ್ಲಿ ಸುಮಾರು ಐನೂರು ಜನ ನೌಕರರಿದ್ದಾರೆ. ಅವರಿಗೆ ಗ್ರಾಚ್ಯುಯಿಟಿ ಸೌಲಭ್ಯ ಕೊಡಲಾಗುತ್ತಿದೆ. ಈ ಯೋಜನೆಯನ್ನು ಖಾದಿ ಮಂಡಲಿಯ ನೌಕರರಿಗೆ ಅನ್ವಯಿಸಲು ಹಣಕಾಸು ಇಲಾಖೆ ಜೊತೆಯಲ್ಲಿ ಮತ್ತು ಖಾದಿ ಮಂಡಲಿ ನೌಕರರ ಸಂಘದ ಅಧ್ಯಕ್ಷರು ಮತ್ತು ಪ್ರತಿನಿಧಿಗಳೊಡನೆ ಚರ್ಚೆ ಮಾಡಿ ಇನ್ನು ಆರು ತಿಂಗಳೊಳಗಾಗಿ ಒಂದು ಪರಿಹಾರವನ್ನು ಕಂಡು ಹಿಡಿದು ತೀರ್ಮಾನ ಮಾಡುತ್ತೇವೆ.

ಶ್ರೀ ಜಿ. ಕೆ. ತಕ್ಕೇಡ್.—ನನ್ನ ಮೂಲ ಪ್ರಶ್ನೆ ಏನೆಂದರೆ, ಕೆಲವು ಮಂದಿ ನೌಕರರು ತಮ್ಮ ಸೇವಾವಧಿಯಲ್ಲೇ ತೀರಿ ಹೋಗಿದ್ದಾರೆ. ಇಂದು ಅವರ ಕುಟುಂಬದವರು ನಿರ್ಗತಿಕರಾಗಿದ್ದಾರೆ ; ಬೀದಿ ಭಿಕಾರಿಗಳಂತೆ ಅಲೆದಾಡುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ಸೌಲಭ್ಯವಿಲ್ಲ, ಮತ್ತು ಯಾವುದೇ ಪರಿಹಾರ ನೀಡಿಲ್ಲ. ಆದುದರಿಂದ, ಅಂತಹ ಕುಟುಂಬಗಳಿಗೆ ತಾತ್ಕಾಲಿಕ ಪರಿಹಾರ ಯೋಜನೆಯನ್ನು ಕೈಗೊಳ್ಳುವಿರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಹಾಲಿ ಇರುವ ಕಾರ್ಮಿಕರ ಬಗ್ಗೆ ಪರಿಶೀಲಿಸುವಾಗ ನಿಧನ ಹೊಂದಿದ ಕಾರ್ಮಿಕರ ಕುಟುಂಬದ ಬಗ್ಗೆಯೂ ಪರಿಶೀಲಿಸಲಾಗುವುದು.